ಈ ಹಿನ್ನೆಲೆಯಲ್ಲಿ ನಾವು ಹಿಂದೂ ವಿವಾಹ ಶಾಸನವನ್ನು (೧೯೫೫) ವಿಶ್ಲೇಷಿಸಬೇಕು. ನಿಷೇಧಿತ ಸಂಬಂಧಿಗಳ ನಡುವೆ ನಡೆಯುವ ವಿವಾಹ ಕಾನೂನುಬಾಹಿರ. ಆದರೆ ಅಂತಹ ಸಂಬಂಧಿಗಳ ನಡುವೆ, ಮದುವೆ ನಡೆಯುವ ದೀರ್ಘಕಾಲದ ಸಂಪ್ರದಾಯವಿದ್ದರೆ ವಿವಾಹ ಕಾನೂನುಬಾಹಿರವಾಗುವುದಿಲ್ಲ. ಪತಿಯು ಅಥವಾ ಪತ್ನಿಯು ಜೀವಂತವಾಗಿರುವಾಗ ಅಂತಹ ಪತ್ನಿ ಅಥವಾ ಪತಿ ಎರಡನೆಯ ಮದುವೆ ಮಾಡಿಕೊಳ್ಳುವಂತಿಲ್ಲ. ಕಾನೂನುಬದ್ಧ ಸಮ್ಮತಿಯನ್ನು ನೀಡಲಾಗದವರು ವಿವಾಹಕ್ಕೆ ಅನರ್ಹರು. ವಿವಾಹವಾಗುವ ಕನ್ಯೆಗೆ ಹದಿನೆಂಟು ವರ್ಷ ತುಂಬಿರಬೇಕು. ವರನಿಗೆ ಇಪ್ಪತ್ತೊಂದು ವರ್ಷ ತುಂಬಿರಬೇಕು. ಕುಟುಂಬ ಸುವ್ಯವಸ್ಥಿತವಾಗಿರಬೇಕಾದರೆ ವಧೂವರರಿಬ್ಬರೂ ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯವುಳ್ಳವರಾಗಿರಬೇಕು. ಸಾಂಪ್ರದಾಯಿಕವಾಗಿ ನಡೆಯುವ ವಿವಾಹಗಳು ಊರ್ಜಿತವಾಗುತ್ತವೆ. ಪವಿತ್ರಾಗ್ನಿಯ ಸುತ್ತ ವಧೂವರರು ಏಳನೆಯ ಹೆಜ್ಜೆಯನ್ನಿಟ್ಟಾಗ ವಿವಾಹ ಊರ್ಜಿತವಾಗುತ್ತದೆ.

**೫. ದಾಂಪತ್ಯದ ಹಕ್ಕುಗಳ ಪುನಃಸ್ಥಾಪನೆ ಮತ್ತು ವಿಚ್ಛೇದನೆ:** ದಂಪತಿಗಳ ನಡುವೆ ವಿರಸವುಂಟಾಗಿ ವಿನಾಕಾರಣ ಗಂಡನಾಗಲಿ ಹೆಂಡತಿಯಾಗಲಿ, ಹೆಂಡತಿಯನ್ನು ಅಥವಾ ಗಂಡನನ್ನು ಬಿಟ್ಟುಹೋದಾಗ ಇದರಿಂದ ನೊಂದ ಹೆಂಡತಿಯಾಗಲಿ, ಗಂಡನಾಗಲಿ ಜಿಲ್ಲಾ ನ್ಯಾಯಾಲಯಕ್ಕೆ ದಾಂಪತ್ಯದ ಹಕ್ಕುಗಳ ಪುನಃಸ್ಥಾಪನೆಗಾಗಿ ಅರ್ಜಿ ಸಲ್ಲಿಸಬಹುದು. ಅರ್ಜಿಯನ್ನು ಪರಿಶೀಲಿಸಿದ ನ್ಯಾಯಾಲಯ ವಿಚಾರಣೆ ನಡೆಸಿದ ನಂತರ, ಅರ್ಜಿದಾರನು ಅರ್ಜಿಯಲ್ಲಿ ನಮೂದಿಸಿರುವ ಅಂಶಗಳು ಸತ್ಯವೆಂದು ಮನವರಿಕೆಯಾದಾಗ, ಅರ್ಜಿದಾರನ ಕೋರಿಕೆಯನ್ನು ಪೂರೈಸಬಹುದು. ಹಿಂದೂ ವಿವಾಹ ಕಾಯಿದೆಯಲ್ಲಿನ ಒಂಬತ್ತನೆಯ ಪ್ರಕರಣವು ಕುಟುಂಬವು ಛಿದ್ರವಾಗದೆ, ಅದನ್ನು ಸುವ್ಯವಸ್ಥಿತಗೊಳಿಸುವ ದಿಶೆಯಲ್ಲಿ ಒಂದು ಯಶಸ್ವಿ ಪ್ರಯತ್ನವಾಗಿದೆ. ಐದು ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆಯಿರುವ ನಗರ ಪ್ರದೇಶಗಳಲ್ಲಿ ಕೌಟುಂಬಿಕ ನ್ಯಾಯಾಲಯಗಳನ್ನು ಸ್ಥಾಪಿಸಿ, ಇಂತಹ ಕಾರ್ಯವನ್ನು ತ್ವರಿತವಾಗಿ ಮಾಡುವ ಪ್ರಯತ್ನವೂ ಪ್ರಶಂಸಾರ್ಹವೇ ಆಗಿದೆ.

ಹಿಂದೂ ವಿವಾಹ ಶಾಸನದ ಹದಿಮೂರನೆಯ ಪ್ರಕರಣದಲ್ಲಿ ವಿಚ್ಛೇದನದ ಬಗ್ಗೆ ಪ್ರಸ್ತಾಪವಿದೆ. ಅನಿವಾರ್ಯವಾದ ಈ ಕೆಳಕಂಡ ಪ್ರಸಂಗಗಳಲ್ಲಿ, ಗಂಡ ಅಥವಾ ಹೆಂಡತಿ, ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದಾಗ, ನ್ಯಾಯಾಲಯ ವಿವಾಹವನ್ನು ಅನೂರ್ಜಿತಗೊಳಿಸಿ, ಕಾನೂನುಬದ್ಧವಾಗಿ ವಿಚ್ಛೇದನಕ್ಕೆ ಅನುಮತಿ ನೀಡಬಹುದು:

**೧. ವಿವಾಹದ ನಂತರ ಗಂಡ/ಹೆಂಡತಿ ಬೇರೊಬ್ಬರೊಡನೆ ಲೈಂಗಿಕ ಸಂಬಂಧವನ್ನು ಸ್ವೇಚ್ಛೆಯಿಂದ ಹೊಂದಿದ್ದಾಗ**
**೨. ಅರ್ಜಿದಾರರ ಮೇಲೆ ಕ್ರೌರ್ಯ ನಡೆಸಿದಾಗ**
**೩. ಕನಿಷ್ಠ ಎರಡು ವರ್ಷಗಳ ಕಾಲ ಅರ್ಜಿದಾರನಿಂದ/ಅರ್ಜಿದಾರಳಿಂದ ನಿರಂತರವಾಗಿ ದೂರವಿದ್ದಾಗ**
**೪. ಮತಾಂತರ ಹೊಂದಿದ್ದಾಗ**
**೫. ಚಿಕಿತ್ಸೆಗೆ ಮೀರಿದ ಮಾನಸಿಕ ಅಸ್ವಸ್ಥತೆ ಇದ್ದಾಗ**
**೬. ಚಿಕಿತ್ಸೆಗೆ ಮೀರಿದ ಕುಷ್ಠರೋಗವಿದ್ದಾಗ**
**೭. ಲೈಂಗಿಕ ರೋಗವಿದ್ದಾಗ**
**೮. ಲೌಕಿಕ ವ್ಯವಹಾರ ತ್ಯಜಿಸಿ ಯಾವುದೇ ಮತದ ಸಂನ್ಯಾಸಿಯಾದಾಗ**
**೯. ಹೇಳದೆ, ಕೇಳದೆ, ಏಳು ವರ್ಷಗಳಿಗೂ ಮಿಕ್ಕು ಕಾಣೆಯಾಗಿದ್ದಾಗ**

**೬. ಕಾನೂನುಬಾಹಿರ ಮದುವೆಗಳ ಫಲವಾಗಿ ಜನಿಸಿದ ಮಕ್ಕಳು:** ಹಿಂದೂ ವಿವಾಹ ಶಾಸನದ ಹದಿನಾರನೆಯ ಪ್ರಕರಣದಲ್ಲಿ ಇದರ ಬಗ್ಗೆ ಪ್ರಸ್ತಾಪವಿದೆ. ಇಂತಹ ಮಕ್ಕಳನ್ನು ಕಾನೂನುಸಮ್ಮತವಲ್ಲದ ಶಿಶುಗಳೆಂದು ಪರಿಗಣಿಸದಿರುವುದು ನಿಜಕ್ಕೂ ಪ್ರಶಂಸಾರ್ಹ. ಇಂತಹ ಮಕ್ಕಳಿಗೆ ತಂದೆತಾಯಿಗಳ ಆಸ್ತಿಯಲ್ಲಿ ಹಕ್ಕಿದೆಯೆಂದು ಹೇಳಲಾಗಿದೆ. ಇನ್ನಾರ ಆಸ್ತಿಯಲ್ಲೂ ಅವರಿಗೆ ಹಕ್ಕಿರುವುದಿಲ್ಲ.

ಮಕ್ಕಳಿಲ್ಲದ ಕುಟುಂಬಗಳು ವಿಚ್ಛಿದ್ರವಾಗುವುದನ್ನು ತಡೆಗಟ್ಟಲು ಪ್ರಾಚೀನ ಕಾಲದಿಂದಲೂ ಕಾನೂನಿನಲ್ಲಿ ಗಂಡನಾದವನಿಗೆ ದತ್ತು ಸ್ವೀಕಾರ ಮಾಡುವ ಹಕ್ಕಿತ್ತು. ಪ್ರಾರಂಭದಲ್ಲಿ ಗಂಡುಮಕ್ಕಳನ್ನು ಮಾತ್ರ ದತ್ತು ತೆಗೆದುಕೊಳ್ಳಬಹುದೆಂದು ಹೇಳಲಾಗಿತ್ತು. ನಂತರದ ದಿನಗಳಲ್ಲಿ ಹೆಣ್ಣುಮಕ್ಕಳನ್ನೂ ದತ್ತು ತೆಗೆದುಕೊಳ್ಳಬಹುದೆಂದು ಕಾನೂನು ಮಾಡಲಾಯಿತು. ಈಗ ವಿಧವೆಯೂ ದತ್ತು ತೆಗೆದುಕೊಳ್ಳಬಹುದೆಂಬ ಶಾಸನ ಸ್ತ್ರೀಯರ ಹಕ್ಕುಗಳ ಪ್ರತಿಪಾದನೆಯೇ ಆಗಿದೆ.

**೭. ಹಿನ್ನುಡಿ:** ಕಾನೂನೆಂಬುದು ಸರ್ವರೋಗನಿವಾರಕ ಸಂಜೀವಿನಿಯೇನಲ್ಲ. ಪ್ರಕೃತಿಸಹಜವಾಗಿ ಮಾನವನೇ ಪರಿಪೂರ್ಣನಲ್ಲ. ಆದ್ದರಿಂದ ಮಾನವನಿರ್ಮಿತವಾದ ಯಾವುದಕ್ಕೂ ಪರಿಪೂರ್ಣತೆಯೆಂಬುದಿಲ್ಲ. ಕಾನೂನು ಮಾನವನ ನಿರ್ಮಾಣವೇ ಆಗಿರುವುದರಿಂದ ಅದೂ ಪರಿಪೂರ್ಣವಲ್ಲ. ಪೌರನ್ಯಾಯ, ಅಪರಾಧನ್ಯಾಯ, ಆಸ್ತಿಗೆ ಸಂಬಂಧಿಸಿದ ಕಾನೂನುಗಳು – ಇತ್ಯಾದಿಗಳೆಲ್ಲ ನಮ್ಮ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುವ ದೃಷ್ಟಿಯಿಂದಲೇ ರಚಿತವಾಗಿವೆ. ಕೌಟುಂಬಿಕ ಸುವ್ಯವಸ್ಥೆ ಸಾಮಾಜಿಕ ಸ್ವಾಸ್ಥ್ಯಕ್ಕೆ ಪೂರಕವೇ ಆಗಿದೆ.

ಈ ದಿಶೆಯಲ್ಲಿ ರಚಿಸಿರುವ ಕಾನೂನುಗಳ ಹಿಂದೆ ತುಂಬಾ ಜಾಣ್ಮೆಯ ಚಿಂತನೆಯಿದೆ. ವಿಚ್ಛೇದನಕ್ಕೆ ಸಂಬಂಧಿಸಿದ ಕಾನೂನೇ ಇದಕ್ಕೆ ನಿದರ್ಶನ. ವಿವಾಹವಾದ ಒಂದು ವರ್ಷದವರೆಗೆ ವಿಚ್ಛೇದನಕ್ಕೆ ಅನುಮತಿ ನೀಡುವುದಿಲ್ಲ. ಕಾರಣ, ವಿವಾಹವಾದ ನವದಂಪತಿಗಳ ನಡುವೆ ಪರಸ್ಪರ ಬಾಂಧವ್ಯ, ಅರಿವು ಮೂಡಬೇಕಾದರೆ ಸಾಕಷ್ಟು ಕಾಲಾವಕಾಶ ಬೇಕು. ಸಣ್ಣಪುಟ್ಟ ವಿರಸಗಳಿಗೆಲ್ಲಾ ವಿಚ್ಛೇದನ ನೀಡುತ್ತಾ ಹೋದರೆ, ಕುಟುಂಬ ವ್ಯವಸ್ಥೆಯೇ ಹಾಳಾಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡೇ ತುಂಬಾ ಜಾಣ್ಮೆಯಿಂದ ಒಂದು ವರ್ಷದ ಅವಧಿಯನ್ನು ವಿಧಿಸಲಾಗಿದೆ. ಹೀಗೆಯೇ ಅನೇಕ ಉದಾಹರಣೆಗಳನ್ನು ನಾವು ನೀಡಬಹುದು.

**ಧರ್ಮೋ ರಕ್ಷತಿ ರಕ್ಷಿತಃ** ಎಂಬುದನ್ನು ನಾವಿಲ್ಲಿ ಗಮನಿಸಬೇಕು. ಕಾನೂನನ್ನು ಯಾರು ಗೌರವಿಸುತ್ತಾರೋ, ರಕ್ಷಿಸುತ್ತಾರೋ ಅವರನ್ನು ಆ ಕಾನೂನೇ ರಕ್ಷಿಸುತ್ತದೆ. ಆದ್ದರಿಂದ ಕೌಟುಂಬಿಕ ಸುವ್ಯವಸ್ಥೆಯ ದೃಷ್ಟಿಯಿಂದ ಕಾನೂನುಗಳಿಗೆ ಮನ್ನಣೆ ನೀಡುವುದು ಮತ್ತು ಅದರಂತೆ ನಡೆದುಕೊಳ್ಳುವುದು, ನಮ್ಮ ಧರ್ಮವಾಗಬೇಕು. •

## ನಮ್ಮ ಸಂಸಾರ, ಆನಂದ ಸಾಗರ

ಧಾರವಾಡಕ್ಕೆ ೨೦ ಕಿ.ಮಿ. ದೂರದಲ್ಲಿ ಲೋಕೂರ್ ಎಂದು ಗ್ರಾಮವಿದೆ. ಅಲ್ಲಿ ಒಂದು ಬೃಹತ್ ಕುಟುಂಬವೇ ಇದೆ. ಸುಮಾರು ೧೪೦ ಸದಸ್ಯರಿರುವ ಈ ಕುಟುಂಬವು ದೇಶದಲ್ಲಿಯೇ ಅತಿದೊಡ್ಡ ಕುಟುಂಬವಿರಬಹುದು ಎಂದು ನಂಬಲಾಗಿದೆ. ಈ ಕುಟುಂಬವನ್ನು ಅದರ ಹಿರಿಯರು ಸಮರ್ಥವಾಗಿ ನಿರ್ವಹಣೆ ಮಾಡಿಕೊಂಡು ಬರುತ್ತಿದ್ದಾರೆ. ಈ ಚಾತುರ್ಯವನ್ನು ನಮ್ಮ ಸರ್ಕಾರಗಳು ಮತ್ತು ಕಂಪನಿಗಳು ಕಲಿತುಕೊಳ್ಳಬೇಕು. ಹಲವಾರು ದಶಕಗಳಿಂದ ಇಷ್ಟೊಂದು ಜನ ಒಟ್ಟಿಗೆ ಬಾಳುತ್ತಿದ್ದಾರೆ. ಇದು ಅವರ ನಡುವೆ ಇರುವ ಪ್ರೀತಿ–ವಿಶ್ವಾಸಗಳಿಗೆ ಹಿಡಿದ ಕೈಗನ್ನಡಿಯಾಗಿದೆ, ಅಲ್ಲವೇ?

ಧರ್ಮೇಂದ್ರ ನರಸಿಂಗನವರ್ ಈ ಕುಟುಂಬದ ಯಜಮಾನ. ಇದು ಜೈನ ಸಮುದಾಯಕ್ಕೆ ಸೇರಿದ ಸಂಸಾರ. ಇವರ ಮನೆಗೆ 'ಜಿನಭಕ್ತರ ನಿವಾಸ' ಎಂದೇ ಹೆಸರು. ಇವರಿಗೆ ೩೦೦ ಎಕರೆ ಜಮೀನಿದೆ. ೫೦ ಜನ ಕೂಲಿಯಾಳುಗಳಿದ್ದಾರೆ. ಗಂಡಸರು ಮುಖ್ಯವಾಗಿ ಹೊಲಗಳಲ್ಲಿ ದುಡಿಯುತ್ತಾರೆ. ಹೆಂಗಸರು ಮಕ್ಕಳನ್ನು ನೋಡಿಕೊಳ್ಳುತ್ತಾರೆ; ಅಡುಗೆಕೆಲಸ ಮಾಡುತ್ತಾರೆ. ಧರ್ಮೇಂದ್ರ ಹೇಳುತ್ತಾರೆ: "ನಾವೆಲ್ಲರೂ ನಮ್ಮ ಹಿರಿಯರು ವಹಿಸಿದ ಕೆಲಸವನ್ನು ಗಮನವಿಟ್ಟು ಮಾಡುತ್ತೇವೆ. ಹೀಗೆ ನಾವು ಆನಂದದಿಂದ ಇದ್ದೇವೆ. ಹೀಗಾಗಿ, ಇಷ್ಟೊಂದು ದೊಡ್ಡ ಸಂಸಾರವನ್ನು ನಿರ್ವಹಿಸಬೇಕಲ್ಲಾ ಎಂದು ಆತಂಕವೂ ನಮಗಿಲ್ಲ....."

ಮಹಿಳೆಯರು ಅಡುಗೆಯ ಮನೆಯಲ್ಲಿ ಸರದಿಯ ಪ್ರಕಾರ ಕೆಲಸ ಮಾಡುತ್ತಾರೆ. ಬೆಳಗ್ಗೆ ಏಳು ಗಂಟೆಯಿಂದಲೇ ಜೋಳದ ರೊಟ್ಟಿಗಳನ್ನು ಮಾಡಲು ಆರಂಭಿಸುತ್ತಾರೆ. ೧೧ ಗಂಟೆಯವರೆಗೆ ಅವರ ಕೆಲಸ. ಅನಂತರ ಎರಡನೆಯ ಪಾಳಿಯವರು ಮಧ್ಯಾಹ್ನ ೧ ಗಂಟೆಯಿಂದ ೩ ಗಂಟೆಯವರೆಗೆ ಕೆಲಸ ಮಾಡುತ್ತಾರೆ. ಇನ್ನೊಂದು ಗುಂಪಿನ ಮಹಿಳೆಯರು ರಾತ್ರಿ ಊಟವನ್ನು ಸಂಜೆ ೫ ರಿಂದ ೭ ಗಂಟೆಯವರೆಗೆ ತಯಾರಿಸುತ್ತದೆ. ರೊಟ್ಟಿಗಳನ್ನು ಮಾಡಲು ದಿನವೂ ೫೦ ಕಿಲೋಗ್ರಾಮ್ ಜೋಳವನ್ನು ಉಪಯೋಗಿಸುತ್ತಾರೆ. ಇತ್ತ ಗಂಡಸರು ಬೆಳಗ್ಗೆ ೭ ಗಂಟೆಗೆ ಹೊಲಕ್ಕೆ ಹೋದವರು, ಬರುವುದು ರಾತ್ರೆ ೭ ಗಂಟೆಗೇ. ಈ ಸಮಯದಲ್ಲಿ ಮಧ್ಯೆ ಊಟಕ್ಕೆ ಬಂದುಹೋಗುತ್ತಾರೆ. ರಾತ್ರಿಯ ಊಟವನ್ನೂ ಎಲ್ಲರೂ ಒಟ್ಟಾಗಿ ಮಾಡಲು ಅನುಕೂಲವಾಗುವುದಿಲ್ಲ. ಮನೆಯ ಸುಮಾರು ೨೦ ಮಕ್ಕಳು ಧಾರವಾಡದಲ್ಲಿ ಓದುತ್ತಿದ್ದಾರೆ. ೧೨ ಮಕ್ಕಳು ಹಳ್ಳಿಯ ಶಾಲೆಗೆ ಹೋಗುತ್ತಾರೆ.

ಇಂತಹ ದೊಡ್ಡ ಮನೆಯಲ್ಲಿ ಹಲವು ವರ್ಷಗಳ ಹಿಂದೆ ೧೮೦ ಮಂದಿ ಇದ್ದರು. ಕೆಲವರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಧಾರವಾಡದಲ್ಲಿ ನೆಲೆಸಿದ್ದಾರೆ. ಮತ್ತೆ ಕೆಲವರು ಕೆಲಸಕ್ಕೆ ಬೇರೆ ಬೇರೆ ನಗರಗಳಿಗೆ ಹೋಗಿದ್ದಾರೆ. ಹೀಗಾಗಿ ಈಗ ಸಂಖ್ಯೆ ೧೪೦ ಕ್ಕೆ ಇಳಿದಿದೆ. ಮನೆಯ ಸಮಸ್ಯೆಗಳನ್ನು ಪರಸ್ಪರ ಮಾತುಕತೆ ಮೂಲಕ ಬಗೆಹರಿಸಿಕೊಳ್ಳುತ್ತಾರೆ. ಮನೆಯಲ್ಲಿ ೯೦ ವರ್ಷ ವಯಸ್ಸಿನ ಒಬ್ಬ ಹಿರಿಯರು ಮತ್ತು ೭೦ ವರ್ಷ ವಯಸ್ಸಿನ ಮತ್ತೊಬ್ಬರು ಇದ್ದಾರೆ. ಅವರಲ್ಲಿ ೭೦ ವರ್ಷ ವಯಸ್ಸಿನ ಪಾರ್ಶ್ವನಾಥ ಹೀಗೆ ಹೇಳುತ್ತಾರೆ: "ನಾವೆಲ್ಲರೂ ಉಳಿದವರ ಸುಖದುಃಖಗಳನ್ನು ಹಂಚಿಕೊಳ್ಳುತ್ತೇವೆ. ಇದರಿಂದ ಒಟ್ಟಿಗೆ ಬಾಳುವುದು ಒಂದು ಸುಖಕರ ಅನುಭವವಾಗಿದೆ." ಇದೇ ಸುಖೀ ಕುಟುಂಬವೊಂದರ ಸೂತ್ರವಲ್ಲವೇ? (ಆಧಾರ : 'ದಿ ವೀಕ್', ಜೂನ್ ೨೨, ೨೦೧೧)

# ಕಾಳಿದಾಸನ ಕಾವ್ಯದಲ್ಲಿ ಕೌಟುಂಬಿಕ ಸಾಮರಸ್ಯ

ಎಚ್. ವಿ. ನಾಗರಾಜರಾವ್



**ಭಾ**ರತೀಯ ಸಂಸ್ಕೃತಿಯ ಶ್ರೇಷ್ಠ ಪ್ರತಿನಿಧಿಯೆನಿಸಿರುವ ಮಹಾಕವಿ ಕಾಳಿದಾಸನು ರಘುವಂಶ, ಕುಮಾರಸಂಭವ ಎಂಬ ಎರಡು ಮಹಾಕಾವ್ಯಗಳನ್ನೂ, ಮೇಘದೂತ, ಋತುಸಂಹಾರ ಎಂಬ ಎರಡು ಖಂಡಕಾವ್ಯಗಳನ್ನೂ, ಮಾಲವಿಕಾಗ್ನಿಮಿತ್ರ, ವಿಕ್ರಮೋ–ರ್ವಶೀಯ, ಅಭಿಜ್ಞಾನ ಶಾಕುಂತಲ ಎಂಬ ಮೂರು ನಾಟಕಗಳನ್ನೂ ರಚಿಸಿದ್ದಾನೆ. ಇವುಗಳಲ್ಲಿ ಅವನು ಸುಂದರ ಕೌಟುಂಬಿಕ ಚಿತ್ರಗಳನ್ನು ತೋರಿಸಿ ಗೃಹಸ್ಥಾಶ್ರಮದ ಮೇಲ್ಮೆಯನ್ನು ಮೆರೆದಿದ್ದಾನೆ.

ರಘುವಂಶದಲ್ಲಿ ದಿಲೀಪ ಮಹಾರಾಜ ಮತ್ತು ಅವನ ಧರ್ಮಪತ್ನಿ ಸುದಕ್ಷಿಣಾ ಆದರ್ಶ ದಂಪತಿಗಳಾಗಿದ್ದರೆಂದು ಕಾಳಿದಾಸ ನಿರೂಪಿಸಿದ್ದಾನೆ. **ಪತ್ನೀ ಸುದಕ್ಷಿಣೇತ್ಯಾಸೀದಧ್ವರಸ್ಯೇವ ದಕ್ಷಿಣಾ** ಎಂಬ ಸುಂದರ ಉಪಮೆ ಕಾಳಿದಾಸನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ಯಜ್ಞದಲ್ಲಿ ದಕ್ಷಿಣೆ ಸಾಫಲ್ಯವನ್ನು ತಂದುಕೊಡುವ ಮುಖ್ಯಾಂಶ. ದಕ್ಷಿಣೆಯನ್ನು ನೀಡದಿದ್ದಾಗ ಯಜ್ಞ ವಿಫಲ. ಹಾಗೆಯೇ ಪತ್ನಿಯಿಲ್ಲದವನ ಬದುಕು ಫಲಹೀನ ಎಂಬ ಅಂತರಾರ್ಥ ಇಲ್ಲಿದೆ. ಅವರಿಬ್ಬರೂ ಪರಸ್ಪರ ಇಚ್ಛಾನುವರ್ತಿಗಳಾಗಿದ್ದುದರಿಂದ ಅವರ ಸಂಬಂಧ ಸುಖಮಯವಾಗಿತ್ತು ಎಂಬುದನ್ನು ಕಾಳಿದಾಸನು ಹೃದಯಂಗಮವಾಗಿ ತೋರಿಸಿದ್ದಾನೆ. ದಿಲೀಪನ ವಂಶದಲ್ಲಿ ಜನಿಸಿದ ಅಜ ಮಹಾರಾಜ ಮತ್ತು ಅವನ ಪತ್ನಿ ಇಂದುಮತಿಯ ಪ್ರೇಮವನ್ನೂ ಕಾಳಿದಾಸನು ಚೆನ್ನಾಗಿ ಚಿತ್ರಿಸಿದ್ದಾನೆ. ಒಲವಿನ ತೀವ್ರತೆ ಅರಿವಿಗೆ ಬರುವುದು ವಿಯೋಗದಲ್ಲಿ. ಆಕಾಶದಲ್ಲಿ ಸಂಚರಿಸುತ್ತಿದ್ದ ನಾರದ ಮಹರ್ಷಿಯ ಪುಷ್ಪಮಾಲೆ ಕಳಚಿ, ಇಂದುಮತಿಯ ಮೇಲೆ ಬಿದ್ದಾಗ, ಅವಳು ಬೆಚ್ಚಿಬಿದ್ದು ಪ್ರಾಣವನ್ನು ಕಳೆದುಕೊಳ್ಳುತ್ತಾಳೆ. ಆಗ ಪತಿ ಅಜನು ಮಾಡುವ ವಿಲಾಪ ಕಾಳಿದಾಸನ ಮಾತುಗಳಲ್ಲಿ ಹೃದಯಸ್ಪರ್ಶಿಯಾಗಿ ಮೂಡಿಬಂದಿದೆ.

**ಗೃಹಿಣೀ ಸಚಿವಃ ಸಖೀ ಮಿಥಃ ಪ್ರಿಯಶಿಷ್ಯಾ ಲಲಿತೇ ಕಲಾವಿಧೌ ।**
**ಕರುಣಾವಿಮುಖೇನ ಮೃತ್ಯುನಾ ಹರತಾ ತ್ವಾಂ ಬತ ಕಿಂ ನ ಮೇ ಹೃತಮ್ ॥**

"ನಾನು ಕಳೆದುಕೊಂಡದ್ದು ಹೆಂಡತಿಯನ್ನು ಮಾತ್ರವಲ್ಲ. ಅವಳು ನನಗೆ ಮಂತ್ರಿಯೂ, ಸ್ನೇಹಿತೆಯೂ, ಪ್ರಿಯಶಿಷ್ಯೆಯೂ ಆಗಿದ್ದಳು. ಅವರೆಲ್ಲರನ್ನೂ ನಾನು ಒಮ್ಮೆಗೇ ಕಳೆದುಕೊಂಡೆ" ಎಂದು ಅಜನು ಮನಸ್ಸು ಕರಗುವಂತೆ ವಿಲಪಿಸುತ್ತಾನೆ. ಈ ಪದ್ಯ ಕಾಳಿದಾಸನ ಪ್ರತಿಭೆಗೆ ಸಾಕ್ಷಿಯಾಗಿದೆ.

ಕುಮಾರಸಂಭವವು ಜಗದಾದಿದಂಪತಿಗಳಾದ ಪಾರ್ವತೀಪರಮೇಶ್ವರರ ಪ್ರೀತಿಯನ್ನು ಪ್ರತಿಬಿಂಬಿಸುವ ಕಾವ್ಯ. ಬೆಟ್ಟಗಳೊಡೆಯನ ಮಗಳು ತನ್ನ ಚೆಲುವಿನಿಂದಲೂ, ಸೊಬಗಿನಿಂದಲೂ ಪರಮೇಶ್ವರನನ್ನು ಒಲಿಸಿಕೊಳ್ಳಲು ಹೋಗಿ,

**ಗಂಡಹೆಂಡಿರ ನಡುವಣ ಅನ್ಯೋನ್ಯತೆ ಮತ್ತು ಪ್ರೇಮಗಳು, ಕೌಟುಂಬಿಕ ಸಾಮರಸ್ಯದ ಸಾರಭೂತ ಅಂಶಗಳು. ಈ ಬಗೆಯ ಪ್ರೀತಿಗೆ ದೇಶಕಾಲಗಳು ಅಡ್ಡಿಯಾಗಬೇಕಾಗಿಲ್ಲ. ಭಾರತದ ಸರ್ವಶ್ರೇಷ್ಠ ಕವಿಯಾದ ಕಾಳಿದಾಸನ ಕೃತಿಗಳಲ್ಲಿ ಈ ಬಗೆಯ ದಾಂಪತ್ಯಪ್ರೇಮದ ಸುಮಧುರ ಚಿತ್ರಣವನ್ನು ಕಾಣಬಹುದು. ಇದನ್ನು ಸೋದಾಹರಣವಾಗಿ ಮನಮುಟ್ಟುವಂತೆ ಬಣ್ಣಿಸಿರುವ ಲೇಖಕರು ವಿಖ್ಯಾತ ಸಂಸ್ಕೃತಜ್ಞರು. ಇವರು ದೇಶವಿದೇಶಗಳಲ್ಲಿ ಸಂಸ್ಕೃತವನ್ನು ಬೋಧಿಸಿದ್ದಾರೆ ಮತ್ತು ಉತ್ತಮ ಭಾಷಣಕಾರರೂ ಆಗಿದ್ದಾರೆ.**